# ಆಹಾ ಸುದ್ದಿ!

★ ಸಸಿತೋಟ

ಐಸ್‌ಲ್ಯಾಂಡ್ ಟಿವಿ ಚಾನೆಲ್‌ಗಳಿಗೆ ನಮ್ಮ ಹಾಗೆ ಬ್ರೇಕಿಂಗ್ ನ್ಯೂಸ್ ಸಿಗುವುದಿಲ್ಲ ಎಂದು ಕಾಣತ್ತದೆ. ಅಲ್ಲಿಯ ಚಾನೆಲ್ ಒಂದು ಇತ್ತೀಚೆಗೆ ಸುದೀರ್ಘ ಕಾರ್ಯಕ್ರಮವೊಂದನ್ನು ಪ್ರಸಾರ ಮಾಡಿತು. ಕುರಿಯೊಂದು ಮರಿ ಹಾಕುವ ನೇರ ಪ್ರಸಾರ 24 ತಾಸುಗಳ ಕಾಲ ನಡೆಯಿತು. ಬೇರೆ ಯಾವುದಾದರೂ ಚಾನೆಲ್ ಈ ದಾಖಲೆ ಮುರಿಯುವುದಿದ್ದರೆ ಮನೆ ಕಟ್ಟುವ ದೃಶ್ಯಗಳನ್ನು ನೇರ ಪ್ರಸಾರ ಮಾಡಬಹುದು.



ದಕ್ಷಿಣ ಕೊರಿಯಾದಲ್ಲಿ ಎಂಇಆರ್‌ಎಸ್ (ಮಿಡ್ಲ್ ಈಸ್ಟ್ ರೆಸ್ಪರೇಟರಿ ಸಿಂಡ್ರೋಮ್) ಸೋಂಕು ಹರಡುತ್ತಿದ್ದು, ಅಲ್ಲಿ ನಡೆದ ಮದುವೆಯಲ್ಲಿ ಎಲ್ಲರ ಬಾಯಿಗೆ ಸರ್ಜಿಕಲ್ ಮಾಸ್ಕ್ ಕಟ್ಟಿದ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಸಮಾರಂಭದಲ್ಲಿ ವಧು- ವರ ಪರಸ್ಪರ ಚುಂಬಿಸುವ ಕಾರ್ಯಕ್ರಮಕ್ಕೆ ಕೊಕ್ ಕೊಡಲಾಯಿತಾ ಎಂದು ಹುಬ್ಬೇರಿಸಬೇಡಿ. ವಿವಾಹ ನಿರ್ವಹಣಾ ಕಂಪೆನಿಯವರು ಎಲ್ಲವೂ ಸಾಂಗವಾಗಿ ಮುಗಿದ ಮೆಲೆ ಎಲ್ಲರ ಬಾಯಿ ಕಟ್ಟಿ ಫೋಟೊ ಹೊಡೆದು ತಮ್ಮ ಪ್ರಚಾರಕ್ಕೆ ಬಳಸಿಕೊಂಡರಂತೆ.



ಚೀನಾದ ಹುನಾನ್ ಪ್ರಾಂತ್ಯದಲ್ಲಿ ಬಳಸಿ ಬಿಟ್ಟ ಲಕ್ಷಾಂತರ ಮೋಟಾರ್‌ಬೈಕ್‌ಗಳನ್ನು ಈ ರೀತಿ ಎಸೆಯಲಾಗಿದೆ. ಚೀನಾದಲ್ಲಿ ಗುಜರಿ ವ್ಯಾಪಾರಿಗಳಿಲ್ಲವೇ?

ಬೆಂಗಳೂರಿನಲ್ಲಿ ಸಾರ್ವಜನಿಕ ಶೌಚಾಲಯ ಬಳಸಿದರೆ ಕೆಲವು ಕಡೆ ಐದು ರೂಪಾಯಿವರೆಗೂ ನೀಡಬೇಕು. ಆದರೆ ಅಹ್ಮದಾಬಾದ್‌ನಲ್ಲಿ ನೀವು ಶೌಚಾಲಯಕ್ಕೆ ಹೋದರೆ ಅವರೇ ನಿಮಗೆ ಒಂದು ರೂಪಾಯಿ ಕೊಟ್ಟು ಕಳಿಸುತ್ತಾರಂತೆ. ಹಾಗಾದರೆ ನೀವು ವಿಸರ್ಜಿಸಿದ ತ್ಯಾಜ್ಯದಿಂದ ಅವರಿಗೇನೋ ಲಾಭ ಇರಬೇಕು ಎಂದು ಲೆಕ್ಕಾಚಾರ ಹಾಕಬೇಡಿ. ಸಾರ್ವಜನಿಕ ಸ್ಥಳಗಳಲ್ಲಿ ಮಲ- ಮೂತ್ರ ವಿಸರ್ಜನೆಗೆ ಬ್ರೇಕ್ ಹಾಕಿ ಸ್ವಚ್ಛತೆ ಕಾಪಾಡಲು ಅಲ್ಲಿಯ ಪಾಲಿಕೆ ಈ ಉಪಾಯ ಹೂಡಿದೆಯಂತೆ. ಬಿಸಿಲಲ್ಲಿ ತಿರುಗಿ ಭಿಕ್ಷೆ ಬೇಡುವ ಬದಲು ಇಡೀ ದಿನ ಶೌಚಾಲಯಗಳಿಗೆ ಭೇಟಿ ನೀಡಿ ಹಣ ಸಂಗ್ರಹಿಸಲು ಅವಕಾಶವಿದೆ.



ಕೊಸೊವೋದ ಕ್ರೀಡಾಂಗಣದಲ್ಲಿ ಮಹಿಳೆಯರ ಸಾವಿರಾರು ಉಡುಪುಗಳನ್ನು ಒಣ ಹಾಕಿ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ. ಆದರೆ ಈ ಬಾರಿ ಕೊಸೊವೊ- ಸರ್ಬಿಯಾ ಯುದ್ಧದಲ್ಲಿ ಅತ್ಯಾಚಾರಕ್ಕೀಡಾಗಿ ಬದುಕುಳಿದ ಮಹಿಳೆಯರಿಗೆ ಧೈರ್ಯ ತುಂಬಲು ಇಂತಹ ಕಲಾ ಪ್ರದರ್ಶನ ಏರ್ಪಡಿಸಲಾಗಿದ್ದು ಕಲಾವಿದನಿಗೆ ಹ್ಯಾಟ್ಸಾಫ್!

ಪಶ್ಚಿಮ ಜರ್ಮನಿಯ ನಗರ ಎಸ್ಸೆನ್‌ನಲ್ಲಿ ಸಾಕು ಪ್ರಾಣಿ ಹಾಗೂ ಮನುಷ್ಯ ಇಬ್ಬರಿಗೂ ಟೂ-ಇನ್-ಒನ್ ಸಮಾಧಿ ಸೌಲಭ್ಯ ಕಲ್ಪಿಸಲಾಗಿದೆ. ಕಲ್ಲಿನ ಮೇಲೆ ಮನುಷ್ಯನ ಕೈ ಹಾಗೂ ಪ್ರಾಣಿಯ ಪಂಜಿನ ಚಿತ್ರ ಮೂಡಿಸಲಾಗಿದ್ದು, ಅಲ್ಲಿಯ ಅಂತ್ಯಸಂಸ್ಕಾರ ನಡೆಸುವ ಕಂಪೆನಿಯೊಂದರ ಹೊಸ ತಂತ್ರವಿದು. ವ್ಯಕ್ತಿ ಹಾಗೂ ಆತನ ಮುದ್ದಿನ ಪ್ರಾಣಿ ಒಟ್ಟಿಗೇ ಸತ್ತರೆ ಪರವಾಗಿಲ್ಲ, ಇಲ್ಲದಿದ್ದರೆ ಸಮಾಧಿಯ ಹೊಂಡವನ್ನು ಮತ್ತೆ ಅಗೆಯುವ ಹೆಚ್ಚುವರಿ ಕೆಲಸ ಕಂಪೆನಿಗೆ.

